ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಸಂಬಂಧಪಟ್ಟಂಥ ಇಲಾಖೆಯ ಅಧಿಕಾರಿಗಳ ಜೊತೆಯಲ್ಲಿ ಮಾತನಾಡಿ ಪರಿಶೀಲಿಸುತ್ತೇನೆ.

ಆಹಾರ ವಿತರಣೆ ಮತ್ತು ಪಡಿತರ ಚೀಟಿಯನ್ನು ನೀಡುವುದು.

60 - ಶ್ರೀ ಎಸ್. ಶಫಿ ಅಹ್ಮದ್ (ತುಮಕೂರು) ; ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ 1991,1992 ಮತ್ತು 93ನೇ ಸಾಲಿಗೆ ವಿತರಿಸಲಾದ ಹೊಸ ಪಡಿತರ ಚೀಟಿಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ಮಾಹಿತಿಯನ್ನು ನೀಡುವುದು)

ಆ) ಹೊಸದಾಗಿ ವಿತರಿಸಲಾದ ಪಡಿತರ ಚೀಟಿಗಳಿಗೆ ಆಹಾರಧಾನ್ಯಗಳನ್ನು ನೀಡಲಾಗುತ್ತಿದೆಯೇ?

ಇ. ಇಲ್ಲದಿದ್ದಲ್ಲಿ ಸರ್ಕಾರವು ಹೊಸದಾಗಿ ನೀಡಲಾದ ಪಡಿತರ ಚೀಟಿದಾರರಿಗೆ ಆಹಾರಧಾನ್ಯಗಳನ್ನು ಯಾವಾಗ ವಿತರಿಸಲಾಗುವುದು?

ಈ. ರಾಜ್ಯದಲ್ಲಿ ಘೋಷಿತವಾಗಿಲ್ಲದ ಕೊಳಚೆ ಪ್ರದೇಶದಲ್ಲಿ ವಾಸಿಸುವ ಪರಿಶಿಷ್ಟ ಜಾತಿ : ಪರಿಶಿಷ್ಟ ಪಂಗಡ, ಆರ್ಥಿಕವಾಗಿ ಹಿಂದುಳಿದ ವರ್ಗದ ಜನರಿಗೆ ತ್ರಿವರ್ಣ ಪಡಿತರ ಚೀಟಿಗಳನ್ನು ನೀಡುವಲ್ಲಿ ಅವಕಾಶವಿದೆಯೇ?

ಉ. ಇಲ್ಲದಿದ್ದಲ್ಲಿ ಯಾವಾಗ ನೀಡಲಾಗುವುದು.

ಶ್ರೀಮತಿ ಮನೋರಮ ಮಧ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

ಅ. ಪಟ್ಟಿಯನ್ನು ಲಗತ್ತಿಸಿದೆ.

ಆ. ಹೌದು.

ಇ. ಪ್ರಶ್ನೆ ಉದ್ಭವಿಸುವುದಿಲ್ಲ.

ಈ. ಈಗ ಜಾರಿಯಲ್ಲಿರುವ ನೀತಿ ಪ್ರಕಾರ ಅವಕಾಶವಿಲ್ಲ.

ಉ. ಪರಿಶೀಲಿಸಲಾಗುವುದು.

ಕ್ರ. ಸಂಖ್ಯೆ	ಜಿಲ್ಲೆಯ ಹೆಸರುಗಳು	1991ನೇ ಸಾಲಿಗೆ	1992ನೇ ಸಾಲಿಗೆ	1993ನೇ ಸಾಲಿಗೆ
1.	ಬೆಂಗಳೂರು(ಅ.ಪ)	70,305	78,649	52,589
2.	ಬೆಂಗಳೂರು (ನಗರ)	12,641	21,767	30,840
3.	ಬೆಂಗಳೂರು (ಗ್ರಾ)	3,279	16,281	1,99,055
4.	ಬೆಳಗಾವಿ	23,318	60,281	78,419
5.	ಬಳ್ಳಾರಿ	30,898	10,102	99,832
6.	ಬೀದರ್	14,359	4,690	4,049
7.	ಬಿಜಾಪುರ	25,316	4,535	87,019
8.	ಚಿಕ್ಕಮಗಳೂರು	2,057	19,292	30,85
9.	ಚಿತ್ರದುರ್ಗ	3,912	3,978	1,33,972
10.	ದಕ್ಷಿಣ ಕನ್ನಡ	11,258	8,709	78,4895
11.	ಧಾರವಾಡ	28,025	1,15,128	71,054

12.	ಗುಲ್ಬರ್ಗಾ	3,262	54,640	71,029
13.	ಹಾಸನ	6,055	35,486	35,231
14.	ಕೊಡಗು	1,202	499	48,283
15.	ಕೋಲಾರ	4,074	11,250	80.333
16.	ಮಂಡ್ಯ	3,455	2,749	7,207
17.	ಮೈಸೂರು	20,738	17,506	64,522
18.	ರಾಯಚೂರು	183	4,174	82,443
19.	ಶಿವಮೊಗ್ಗ	4,397	2,743	19,742
20.	ತುಮಕೂರು	5,677	16,370	10,665
21.	ಉತ್ತರ ಕನ್ನಡ	5,382	28,442	17,812
	ಒಟ್ಟು:	2,79,793	5,19,361	13,03,482

ಶ್ರೀ ಎಸ್. ಷಫಿ ಅಹಮದ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರ ಉತ್ತರದಲ್ಲಿ ರೇಷನ್ ಕಾರ್ಡ್ಗಳಲ್ಲಿ ಪ್ರತಿಯೊಬ್ಬರಿಗೂ ನಾವು ರೇಷನನ್ನು ಕೊಡುತ್ತಿದ್ದೇವೆಂದು ಹೇಳಿದ್ದಾರೆ. ಇವತ್ತು ನಾನು ಉದಾಹರಣೆಗಾಗಿ ಹೇಳುವುದಾದರೆ ತುಮಕೂರು ಜಿಲ್ಲೆಯಲ್ಲಿ ಸುಮಾರು ಮೂರುವರೆ ಲಕ್ಷ ರೇಷನ್ ಕಾರ್ಡನ್ನು ವಿತರಣೆ ಮಾಡಿದ್ದಾರೆ. ಮೊನ್ನೆ ತಾನೆ ಕೆ.ಡಿ.ಪಿ. ಮೀಟಿಂಗ್ನಲ್ಲಿ ಅದರ ಬಗ್ಗೆ ರೆವ್ಯೂ ಮಾಡಿದಾಗ ತೊಂಭತ್ತುಸಾವಿರ ವಿತರಣೆಯಾಗಿರುವ ಕಾರ್ಡ್ಸ್ಗೆ ರೇಷನನ್ನು ಕೊಡುತ್ತಿಲ್ಲ ಎಂದು ನಮ್ಮ ಜಿಲ್ಲಾಧಿಕಾರಿಗಳು ಉತ್ತರವನ್ನು ಹೇಳಿದ್ದಾರೆ. ಅದೇ ರೀತಿಯಾಗಿ ಅರ್ಬನ್ ವ್ಯಾಪ್ತಿಯಲ್ಲಿ ಬಂದಿರುವ ಎಸ್.ಸಿ ಮತ್ತು ಎಸ್.ಟಿ.ಯವರಿಗೆ ಟ್ರೈಕಲರ್ ಕಾರ್ಡ್ಗಳನ್ನು ಕೊಡುತ್ತಿಲ್ಲ. ಇದರ ಬಗ್ಗೆಯೂ ಸಹಾ ಇದು ಸಾಧ್ಯವಾಗಲಿಕ್ಕಿಲ್ಲ ಎಂದು ತಾವು ಮಾಹಿತಿಯನ್ನು ಕೊಟ್ಟಿದ್ದೀರಿ ಆದರೆ ಎಕಾನಾಮಿಕಲಿ ವೀಕರ್ ಸೆಕ್ಷನ್ನವರಿಗೆ ಏನು ನೀವು ಟ್ರೈಕಲರ್ಸ್ ಕಾರ್ಡ್ಸ್ ಕೊಡಬೇಕಾಗಿದೆ, ಅದನ್ನು ವಿತರಣೆ ಮಾಡಬೇಕೆಂದು ಕೇಳುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : (ಆಹಾರ ಮಂತ್ರಿಯವರ ಪರವಾಗಿ) : ಮಾನ್ಯ ಅಧ್ಯಕ್ಷರೇ, ಈಗಾಗಲೇ ಮಾನ್ಯ ಸದಸ್ಯರು ಕೇಳಿದಂಥ ಪ್ರಶ್ನೆಗೆ ಬರವಣಿಗೆಯಲ್ಲಿ ಉತ್ತರವನ್ನು ಕೊಟ್ಟಿದೆ. ಆದರೂ ಕೂಡ ಈಗ ಕಾರ್ಡ್ ಏನು ಹೆಚ್ಚಿಗೆ ಆಗಿದೆ, ಅದರ ಬಗ್ಗೆ ನಾನು ಈಗಾಗಲೇ ಸ್ಪಷ್ಟಪಡಿಸಿದ್ದೇನೆ. ನಮಗೆ ಸಿಗತಕ್ಕಂಥ ಕೋಟಾ ಗೌರ್ನಮೆಂಟ್ ಆಫ್ ಇಂಡಿಯಾದಿಂದ ಅಷ್ಟೇ ಬರುತ್ತಿದೆ. ಆ ಕೋಟಾವನ್ನು ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ನಾವು ಕಳುಹಿಸುತ್ತೇವೆ. ಅಲ್ಲಿ ಕಾರ್ಡ್ನ್ನು ಹೆಚ್ಚಿಗೆ ಮಾಡಿದ್ದರಿಂದ ಕ್ವಾಂಟಿಟಿ ಹೆಚ್ಚಿಗೆ ಆಗಿಲ್ಲವಾದುದರಿಂದ ಇದ್ದುದರಲ್ಲಿಯೇ ಇವತ್ತು ಅವರು ಕೊಡುತ್ತಿದ್ದಾರೆ. ಆದ್ದರಿಂದ ಕೆಲವು ಕಡೆ ತಾರತಮ್ಯ ಆಗುತ್ತಿದೆ, ತೊಂದರೆಯಾಗುತ್ತಿದೆ ಎನ್ನತಕ್ಕಂಥದ್ದನ್ನು ಅವರು ಹೇಳುತ್ತಿದ್ದಾರೆ. ಅದಕ್ಕಾಗಿ ನಾವು ಪ್ರಯತ್ನ ಮಾಡುತ್ತಿದ್ದೇವೆ, ಹೆಚ್ಚಿನ ಕ್ವಾಂಟಿಟಿ ಬಂದರೆ ಇದನ್ನು ಕೊಡಬೇಕೆಂದು ಮಾಡಿದ್ದೇವೆ. ಮತ್ತು ಅವರು ಕೊಳಚೆ ಪ್ರದೇಶದಲ್ಲಿ ಅವು ಅನ್ ರೆಕಗ್ನೈಸ್ಡ್ ಅಥವಾ ನೋಟಿಫೈಡ್ ಏರಿಯಾ ಏನು ಇಲ್ಲ, ಅಂಥ ಏರಿಯಾದಲ್ಲಿ ಮನೆ ನಂಬರು ಇಂಥವು ಇರುವುದಿಲ್ಲ. ಅದಕ್ಕಾಗಿ ಇಂಥ ಕಡೆಯಲ್ಲಿ ಈ ಕಾರ್ಡುಗಳನ್ನು ಕೊಟ್ಟಿಲ್ಲ. ಇದನ್ನು ಬೇಕಾದರೆ ಪುನಃ ನಾವು ಸಂಬಂಧ ಪಟ್ಟಂಥ ಜಿಲ್ಲಾಧಿಕಾರಿಗಳಿಗೆ ಹೇಳಿ ಮನೆ ನಂಬರುಗಳನ್ನು ಕೊಟ್ಟು ಅಥವಾ ವೋಟರ್ಸ್ ಲಿಸ್ಟ್ ನೋಡಿ ಅದರ ಮೇಲೆ ಬೇಕಾದರೆ ಪುನಃ ಕಾರ್ಡ್ನ್ನು ಹಂಚತಕ್ಕಂಥದ್ದನ್ನು ಮಾಡಬೇಕು. ಇದನ್ನು ನಾವು ಮಾಡಿಸುತ್ತೇವೆ.

ಶ್ರೀ ಎಸ್. ಶಫಿ ಅಹಮದ್ : ಅಧ್ಯಕ್ಷರೆ, ಕಳೆದ ಒಂದು ವರ್ಷದಿಂದ ಈ ರೀತಿ ಕೊಟ್ಟಿರುವಂತಹ ರೇಷನ್ ಕಾರ್ಡ್ಸ್‌ಗಳಿಗೆ ರೇಷನ್ ಕೊಟ್ಟಿಲ್ಲ. ಸನ್ಮಾನ್ಯ ಸಚಿವರು ಕೊಟ್ಟಿರುವ ಕಾರ್ಡಿನ ಅಲಾಟ್‌ಮೆಂಟಿನಲ್ಲಿ ಎಲ್ಲರಿಗೂ ವಿತರಣೆ ಮಾಡುತ್ತಿದ್ದೇವೆ ಎಂದು ಹೇಳುತ್ತಿದ್ದಾರೆ. ಆದರೆ ಹೊಸದಾಗಿ ಏನು ರೇಷನ್ ಕಾರ್ಡ್ ಕೊಟ್ಟಿದ್ದಾರೆ, ಇದುವರೆಗೂ ಒಬ್ಬರಿಗೂ ರೇಷನ್ ಒದಗಿಸಿಲ್ಲ. ಅದರಲ್ಲೂ ಗ್ರಾಮಾಂತರ ಪ್ರದೇಶದಲ್ಲಿಯೂ ಸಾಮಾನ್ಯ ಕಲರ್ಸ್ ಕಾರ್ಡ್ಗೆ ಹಾಗೂ ಟ್ರೈ ಕಲರ್ಸ್ ಕಾರ್ಡ್ಗೆ ರೇಷನ್ ಸರ್ಕಾರದಿಂದ ಏನು ಕೊಡಬೇಕಾಗಿತ್ತು ಅದನ್ನು ಕೊಟ್ಟಿಲ್ಲ. ಕಳೆದ ಒಂದು ವರ್ಷದಿಂದ ನಾನು ಒತ್ತಾಯ ಮಾಡುತ್ತಿದ್ದೇನೆ. ಆದರೂ ಸಹ ಇವತ್ತಿನ ತನಕ ರೇಷನ್ ವಿತರಣೆ ಆಗಿಲ್ಲ. ಬಹಳ ಮುಖ್ಯವಾಗಿ. ಅರ್ಬನ್ ಏರಿಯಾದಲ್ಲಿ ಸ್ಲಮ್ಸ್ ಏನು ಇವೆ ಅಲ್ಲಿ ಹರಿಜನರಿಗೆ ಟ್ರೈ ಕಲರ್ಸ್ ಕೊಡಬೇಕಾಗಿತ್ತು. ಒಂದು ವರ್ಷದ ಹಿಂದೆಯೂ ಸಹ ಸದನದಲ್ಲಿ ಸಚಿವರು ಆಶ್ವಾಸನೆ ಕೊಟ್ಟಿದ್ದರು. ರೇಷನ್ ಕಾರ್ಡ್ಸ್ ಕೊಡಿಸಿಕೊಡುತ್ತೇವೆ ಎಂದು ತಿಳಿಸಿದ್ದರೂ ಕೊಡಿಸಲಿಲ್ಲ. ಅತಿ ಶೀಘ್ರದಲ್ಲಿ ಈಗಲಾದರೂ ತಾವು ಕೊಡಿಸಿಕೊಡುತ್ತೀರಾ ಎಂದು ತಮ್ಮಿಂದ ಉತ್ತರವನ್ನು ಬಯಸುತ್ತಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಆದಷ್ಟು ಶೀಘ್ರವಾಗಿ ಕೊಡಿಸುತ್ತೇನೆ.

ಶ್ರೀ ಎಂ.ಎಸ್. ಆತ್ಮಾನಂದ : 65ನೇ ಪ್ರಶ್ನೆಯನ್ನು ಸಂಸ್ಕೃತಿ ಸಚಿವರಿಗೆ ಕೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು) : ಮಾನ್ಯ ಸಚಿವರು ಇಲ್ಲ, ಆ ನಂತರ ಕರೆಯಬಹುದು.

ಅಧ್ಯಕ್ಷರು : ಆತ್ಮಾನಂದ ಅವರೇ, ನಿಮ್ಮ ಪ್ರಶ್ನೆಯನ್ನು ಅನಂತರ ತೆಗೆದು ಕೊಳ್ಳುತ್ತೇನೆ.

ಅಭಿವೃದ್ಧಿ ಕಾಮಗಾರಿಗಳಿಗೆ ಹಣ ಬಿಡುಗಡೆ

66 - ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ); ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಕಳೆದ 3 ತಿಂಗಳುಗಳಲ್ಲಿ ರಾಜ್ಯದ ಬೊಕ್ಕಸದಿಂದ ವಿವಿಧ ಇಲಾಖೆಗಳಿಗೆ (ನೀರಾವರಿ, ಕಾಮಗಾರಿ, ವಿದ್ಯುಚ್ಛಕ್ತಿ, ಗ್ರಾಮಿಣಾಭಿವೃದ್ಧಿ ಮತ್ತು ವಸತಿ), ಅಭಿವೃದ್ಧಿ ಕೆಲಸಗಳಿಗಾಗಿ ಬಿಡುಗಡೆಯಾಗಿರುವ ಹಣ ಎಷ್ಟು?

ಆ. ಆ ಇಲಾಖೆಗಳಿಗೆ ಸಂಬಂಧಪಟ್ಟಂತೆ ಗುತ್ತಿಗೆದಾರರಿಗೆ ಮತ್ತು ಫಲಾನುಭವಿಗಳಿಗೆ ಬಾಕಿ ಇರುವ ಹಣ ಎಷ್ಟು?

ಇ. ಆ ಹಣವನ್ನು ಬಿಡುಗಡೆ ಮಾಡಲು ಆಗಾಗ್ಗೆ ತಾಲ್ಲೂಕು ಮತ್ತು ಜಿಲ್ಲಾ ಯೋಜನೆಗಳಿಗೆ ನಿರ್ಬಂಧನೆಗಳನ್ನು ಹಾಕುತ್ತಿರುವುದು ನಿಜವೇ ಹಾಗೂ ಆದಕ್ಕೆ ಕಾರಣಗಳೇನು?

ಶ್ರೀ ಎಂ.ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು)

ಅ.

	(ಲಕ್ಷ ರೂ.ಗಳಲ್ಲಿ)
1. ನೀರಾವರಿ	13957.18
2. ಕಾಮಗಾರಿ	4024.86
3. ಇಂಧನ	600.00
4. ಗ್ರಾಮಿಣಾಭಿವೃದ್ಧಿ	33720.77